1

ತಮ್ಮನ್ನು ‘ಆಕಸ್ಮಿಕ ಬರಹಗಾರ’ ಎಂದು ಸದಾ ಕರೆದುಕೊಳ್ಳುತ್ತಿದ್ದ ‘ಒಂದು ತೊಲ ಪುನುಗು ಮತ್ತು ಇತರ ಕತೆಗಳು’ (1969), ‘ಕುದುರೆಮೊಟ್ಟೆ’ (1974), ‘ಅಂಜಿಕಿನ್ಯಾತಕಯ್ಯಾ’ (1980) ಮೊದಲಾದ ಕೃತಿಗಳ ಲೇಖಕ ಕಾಮರೂಪಿ ಈಚೆಗೆ ತೀರಿಕೊಂಡರು. ಅವರ ಮೂಲ ಹೆಸರು ಎಂ.ಎಸ್. ಪ್ರಭಾಕರ. ಅವರು ತಮ್ಮ ಸಾವಿನ ಬಳಿಕ ಶ್ರದ್ಧಾಂಜಲಿ ಬರೆಯುವವರು ಜೀವನ ವಿವರಗಳಿಗೆ ತಡಕಾಡದಂತೆ, ಸ್ವತಃ ತಮ್ಮ ಮರಣದ ವರದಿಯನ್ನೂ ಹತ್ತುವರ್ಷ ಮೊದಲೇ ಬರೆದಿಟ್ಟಿದ್ದರು. ಅದರಲ್ಲಿ ಕೇವಲ ಜೀವನ ವಿವರಗಳಿಲ್ಲ. ಅವರು ಮಾತ್ರ ಬರೆಯಬಹುದಾದ ಖಾಸಗಿ ಸಂಗತಿಗಳಿಂದ ಕೂಡಿದ ಸ್ವವ್ಯಕ್ತಿತ್ವದ ಚಿತ್ರಣವೂ ಇದೆ. ಆಂಗ್ಲ ಭಾಷೆಯಲ್ಲಿರುವ ಆ ಮೃತ್ಯುಪತ್ರದ ಸಾರ ಹೀಗಿದೆ:

‘‘ಶಿಕ್ಷಕರೂ ಪತ್ರಕರ್ತರೂ, ಕನ್ನಡ ಮತ್ತು ಆಂಗ್ರೇಜಿಯಲ್ಲಿ ಲೇಖಕರೂ ಆಗಿದ್ದ ಮೋಟ್ನಹಳ್ಳಿ ಸೂರಪ್ಪ ಪ್ರಭಾಕರ ಅವರ ಸಾವು, ನಿನ್ನೆ ಅವರ ಕೋಲಾರದ ಮನೆಯಲ್ಲಿ ಸಂಭವಿಸಿತು. ಅವಿವಾಹಿತರಾಗಿದ್ದ ಅವರಿಗೆ 76 ವರ್ಷವಾಗಿತ್ತು. ತಮ್ಮ ಉಯಿಲಿನಲ್ಲಿ ಅಪೇಕ್ಷಿಸಿದಂತೆ ಅವರ ದೇಹವನ್ನು ಯಾವುದೇ ಧಾರ್ಮಿಕ ಆಚರಣೆಗಳಿಲ್ಲದೆ ಸಂಸ್ಕಾರ ಮಾಡಲಾಯಿತು.

ಮೇ 1936ರಲ್ಲಿ ಹುಟ್ಟಿದ ಪ್ರಭಾಕರ, ಕರ್ನಾಟಕದ ಕೋಲಾರದಲ್ಲಿ ಬೆಳೆದರು. ಅಲ್ಲೇ ಶಾಲೆಗೆ ಹೋದರು. 1956ರಲ್ಲಿ ಆನರ್ಸ್ ಪದವಿಯನ್ನೂ, 1957ರಲ್ಲಿ ಆಂಗ್ಲ ಭಾಷೆ ಮತ್ತು ಸಾಹಿತ್ಯಗಳಲ್ಲಿ ಸ್ನಾತಕೋತ್ತರ ಪದವಿಯನ್ನೂ ಬೆಂಗಳೂರಿನ ಸೆಂಟ್ರಲ್ ಕಾಲೇಜಿನಲ್ಲಿ ಗಳಿಸಿದರು. 1962ರ ಫೆಬ್ರುವರಿಯಲ್ಲಿ ಗೌಹಾತಿ ವಿಶ್ವವಿದ್ಯಾಲಯ ಸೇರುವ ಮೊದಲು, ನಾಲ್ಕು ವರ್ಷ ಕಾಲ ಬೆಂಗಳೂರು–ಧಾರವಾಡಗಳಲ್ಲಿ ಅಧ್ಯಾಪನ ಮಾಡಿದರು. 1976ರ ಡಿಸೆಂಬರಿನಲ್ಲಿ ಗೌಹಾತಿ ವಿ.ವಿ.ಗೆ ರಾಜೀನಾಮೆ ಕೊಟ್ಟು, ‘ಎಕನಾಮಿಕ್ ಅಂಡ್ ಪೊಲಿಟಿಕಲ್ ವೀಕ್ಲಿ’ಯ ಸಂಪಾದಕೀಯ ಸದಸ್ಯನಾಗಿ ಸೇರಿಕೊಂಡರು. 1983ರ ಜೂನ್‌ನಲ್ಲಿ ಅಸ್ಸಾಂ ಹಾಗೂ ಅದರ ನೆರೆರಾಜ್ಯಗಳ ವಿದ್ಯಮಾನಗಳನ್ನು ವರದಿಮಾಡಲು, ಚೆನ್ನೈನ ‘ದಿ ಹಿಂದೂ’, ‘ಫ್ರಂಟ್‌ಲೈನ್’ ಪತ್ರಿಕೆಗಳ ವಿಶೇಷ ವರದಿಗಾರನಾಗಿ ಗೌಹಾತಿಗೆ ಮರಳಿದರು. 1994ರ ಜೂನಿನಲ್ಲಿ ಇವೇ ಪತ್ರಿಕೆಗಳ ವಿಶೇಷ ವರದಿಗಾರನಾಗಿ ಜೋಹಾನ್ಸ್‌ಬರ್ಗ್‌ಗೆ ತೆರಳಿದರು. 2002ರಲ್ಲಿ ಗೌಹಾತಿಗೆ ವಾಪಾಸಾದರು. ಮರಳಿದ ಒಂದು ಮಾಸದ ಬಳಿಕ ನಿವೃತ್ತಿ ಹೊಂದಿದರು.

ಶಿಕ್ಷಕರಾಗಿ ಪ್ರಭಾಕರ ತಮ್ಮ ಸಹೋದ್ಯೋಗಿಗಳಲ್ಲಿ ಅಲ್ಲವಾದರೂ ವಿದ್ಯಾರ್ಥಿಗಳ ನಡುವೆ ಜನಪ್ರಿಯರಾಗಿದ್ದರು. ತಮ್ಮ ವೃತ್ತಿಯಲ್ಲಿ ತಕ್ಕ ಮನ್ನಣೆ ಹಾಗೂ ಉನ್ನತಿಯನ್ನು ಅನುಭವಿಸಿದ ಹೊರತಾಗಿಯೂ ತಾವು ವಿಫಲಶಿಕ್ಷಕರೆಂಬ ಅಭಿಪ್ರಾಯ ಅವರಿಗಿತ್ತು. ಅವರು ತಮ್ಮ ಅಭಿರುಚಿಗೆ ಹತ್ತಿರವಾಗಿದ್ದ ರಾಜಕೀಯ ಪತ್ರಿಕಾವೃತ್ತಿಗೆ ಸೇರಿಕೊಂಡರು. ಪಿಎಚ್‌ಡಿ. ಪ್ರಬಂಧ ಒಳಗೊಂಡಂತೆ ಅವರ ವಿದ್ವತ್ ಬರಹಗಳು, ರಾಜಕೀಯ, ಅರ್ಥಶಾಸ್ತ್ರ ಮತ್ತು ಸಾಮಾಜಿಕ ಬದಲಾವಣೆಗಳಂತಹ ವಿಶಾಲ ಸಂಗತಿಗಳಿಗೆ ಲಗತ್ತಾಗಿದ್ದವು; ಅವುಗಳಲ್ಲಿ ಸಾಹಿತ್ಯ, ಸಮಾಜ, ರಾಜಕಾರಣಗಳ ನಡುವಣ ಅಂತರ್ ಸಂಬಂಧಗಳಿದ್ದವು.

ಪ್ರಭಾಕರ ಅವರಿಗೆ ಗೌಹಾತಿಗೆ ಮರಳುವುದು ಒಂದು ಆಹ್ಲಾದಕರ ಅವಕಾಶವಾಗಿತ್ತು. ಅವರು ಗೌಹಾತಿಯಲ್ಲಿ ಮನೆ ಮಾಡಿ, ವೃತ್ತಿಬದುಕಿನ ಉಳಿದ ವರ್ಷಗಳನ್ನು ಜೋಹಾನ್ಸ್‌ಬರ್ಗ್ ಕೇಪ್‌ಟೌನುಗಳಲ್ಲಿ ಕಳೆದರು. ಈ ವರ್ಷಗಳಲ್ಲಿ ಈಶಾನ್ಯ ಭಾರತದ ಪ್ರದೇಶಗಳಿಗೂ, ಅವುಗಳ ನೆರೆದೇಶಗಳಿಗೂ, ಆಫ್ರಿಕಾದ ದಕ್ಷಿಣ ಮಧ್ಯ ಪೂರ್ವ ಪಶ್ಚಿಮ ಭಾಗಗಳಿಗೂ ತಿರುಗಾಟ ನಡೆಸಿದರು. ತಮ್ಮ ಕಸುಬಿನ ಭಾಗವಾಗಿ ಸಾಕಷ್ಟು ಬರವಣಿಗೆ ಮಾಡಿದರು. ತಾತ್ಕಾಲಿಕ ಗುಣವುಳ್ಳ ಅವೆಲ್ಲವೂ ಮರೆಯಲು ತಕ್ಕುದಾಗಿವೆ.

ಪ್ರಭಾಕರ ಮೇಲುನೋಟಕ್ಕೆ ಸ್ನೇಹಪರ ಮತ್ತು ವಿಶ್ವಾಸಪೂರ್ವಕ ಅನಿಸಿದರೂ, ಅರ್ಥಮಾಡಿಕೊಳ್ಳಲು ಮತ್ತು ಸಹವಾಸಕ್ಕೆ ಸುಲಭದ ಆಸಾಮಿಯಲ್ಲ. ಅವರ ಪ್ರಮುಖ ಗುಣವೆಂದರೆ, ಆವರಿಸಿಕೊಳ್ಳುವ ಖಿನ್ನತೆ. ತೋರಿಕೆಗೆ ಸಿನಿಕತೆ,